**ವಿಶ್ವೇಶ್ವರಯ್ಯ ನಾಲಾ ಬಯಲಿನ ಅಚ್ಚುಕಟ್ಟು ಪ್ರದೇಶದಲ್ಲಿ ನೀರಾವರಿ ವ್ಯವಸ್ಥೆಗೆ ಅನುದಾನ**

3192 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿಶ್ವೇಶ್ವರಯ್ಯ ನಾಲಾ ಅಚ್ಚುಕಟ್ಟು ಪ್ರದೇಶದಲ್ಲಿ ನೀರಾವರಿ ವ್ಯವಸ್ಥೆಯ ನಿರ್ವಹಣೆಗೆ ಪ್ರತಿ ವರ್ಷ ಒದಗಿಸಲಾಗುವ ಅನುದಾನ ಎಷ್ಟು?*

ಆ) *ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ಈವರೆವಿಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ?*

ಇ) *ಪ್ರಸಕ್ತ ಸಾಲಿನಲ್ಲಿ ಅಚ್ಚುಕಟ್ಟು ಪ್ರದೇಶದಲ್ಲಿ ಪ್ರೋಗ್ರಾಂ ಆಫ್ ವರ್ಕ್ಸ್ (Programme of Works) ಅನುಮೋದನೆ ಯಾಗಿದೆಯೇ?*

ಈ) *ನೀರಾವರಿ ವ್ಯವಸ್ಥೆಯ ನಿರ್ವಹಣೆಗೆ ತಲಾ ಎಕರೆಗೆ ಎಷ್ಟು ನಿರ್ವಹಣಾ ಅನುದಾನ ನಿಗಧಿ ಮಾಡಲಾಗಿದೆ?*

ಶ್ರೀ ಹೆಚ್.ಕೆ. ಪಾಟೀಲ್ (ಬೃಹತ್ ನೀರಾವರಿ ಮಂತ್ರಿಗಳು) :

ಅ) 2000-01ನೇ ಸಾಲಿನಲ್ಲಿ ವಿಸ್ತರಣೆ ಮತ್ತು ಸುಧಾರಣೆಗೆ ರೂ. 37.67 ಲಕ್ಷಗಳು ಹಾಗೂ ನಿರ್ವಹಣೆ ಮತ್ತು ದುರಸ್ಥಿಗೆ ರೂ. 239.11 ಲಕ್ಷಗಳು ಒಟ್ಟು 276.78 ಲಕ್ಷಗಳ ಅನುದಾನ ಒದಗಿಸಲಾಗಿದೆ.

ಆ) ಸೆಪ್ಟೆಂಬರ್ 2000 ಅಂತ್ಯಕ್ಕೆ ಲೆಕ್ಕ ಶೀರ್ಷಿಕೆ 2701 ರಡಿ ರೂ. 198.00 ಲಕ್ಷಗಳು
ಸೆಪ್ಟೆಂಬರ್ 2000 ಅಂತ್ಯಕ್ಕೆ ಲೆಕ್ಕ ಶೀರ್ಷಿಕೆ 2702 ರಡಿ ರೂ. 17.10 ಲಕ್ಷಗಳು

ಇ) ಆಗಿದೆ.

ಈ) ನೀರಾವರಿ ವ್ಯವಸ್ಥೆಯ ನಿರ್ವಹಣೆಗೆ ತಲಾ ಒಂದು ಹೆಕ್ಟೇರ್‌ಗೆ ರೂ. 198 ಹರಿ ಹಾಗೂ ರೂ. 750 ಏತ ನೀರಾವರಿಗೆ ನಿರ್ವಹಣಾ ಅನುದಾನ ನೀಡಲಾಗುತ್ತಿದೆ.

**ರಾಜ್ಯದ ಎಲ್ಲಾ ದೇವಸ್ಥಾನಗಳಿಗೆ ಏಕರೂಪ ಕಾಯಿದೆ**

3193 - ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಎಲ್ಲಾ ದೇವಸ್ಥಾನಗಳಿಗೆ ಅನ್ವಯವಾಗುವಂತೆ ಸಮಗ್ರವಾಗಿ "ಏಕರೂಪ ಕಾಯಿದೆ" ಜಾರಿಗೆ ತರಲು ಉದ್ದೇಶಿಸಲಾಗಿದೆಯೇ?*

ಆ) *ಹಾಗಿದ್ದಲ್ಲಿ ಇದರ ವಿವರಗಳೇನು?*

ಶ್ರೀ ಬಾಬುರಾವ್ ಚಿಂಚನಸೂರು (ಮುಜರಾಯಿ ಸಚಿವರು)

ಅ) ಹೌದು.

ಆ) ಕರ್ನಾಟಕ ಧರ್ಮಾರ್ಥ ದತ್ತಿಗಳು ಮತ್ತು ಹಿಂದೂ ಮತೀಯ ಸಂಸ್ಥೆಗಳ ಅಧಿನಿಯಮ 1997 ಕರಡು ಮಸೂದೆಯನ್ನು ಜಂಟಿ ಸಲಹಾ ಸಮಿತಿಯು ಈಗಾಗಲೇ ಪರಿಶೀಲಿಸಿ ದಿನಾಂಕ 24-3-1999 ರಂದು ಉಭಯ ಸದನಗಳಲ್ಲಿ ಮಂಡಿಸಲಾಗಿದೆ.

## ಕೆ.ಪಿ.ಟಿ.ಸಿ.ಎಲ್. ನಿಂದ ಗ್ರಾಹಕರಿಗೆ ದೊರಕುವ ಹೆಚ್ಚಿನ ಸೇವಾ ಸೌಲಭ್ಯಗಳು

3194 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕರ್ನಾಟಕ ವಿದ್ಯುತ್ ಮಂಡಳಿಯನ್ನು ಕೆ.ಪಿ.ಟಿ.ಸಿ.ಎಲ್. ಆಗಿ ಮಾರ್ಪಾಡು ಮಾಡಿದ ತರುವಾಯ ಈ ಸಂಸ್ಥೆಯ ಕಾರ್ಯ ಸುಧಾರಣೆ ಆಗಿದೆಯೇ?*

*ಆ) ಹಾಗಿದ್ದಲ್ಲಿ ಗ್ರಾಹಕರಿಗೆ ದೊರಕಿರುವ ಹೆಚ್ಚಿನ ಸೇವಾ ಸೌಲಭ್ಯಗಳೇನು?*

*ಇ) ಗ್ರಾಹಕರಿಗೆ ಉತ್ತಮ ಗುಣಮಟ್ಟದ ವಿದ್ಯುತ್ ಪೂರೈಕೆ ಗ್ರಾಹಕರಿಗೆ ಹೊರೆಯಾಗದ ರೀತಿಯಲ್ಲಿ ದೊರಕುತ್ತಾ ಇದೆಯೇ?*

*ಈ) ಪ್ರಸ್ತುತ ವಿದ್ಯುತ್ ಬೇಡಿಕೆ ಮತ್ತು ಪೂರೈಕೆ ಮಧ್ಯ ಇರುವ ಅಂತರದ ನಿವಾರಣೆಗಾಗಿ ಸರ್ಕಾರವು ಯಾವ ಕ್ರಮ ರೂಪಿಸಿದೆ?*

ಶ್ರೀ ವೀರಕುಮಾರ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಕೆ.ಪಿ.ಟಿ.ಸಿ.ಎಲ್ ಆಗಿ ಮಾರ್ಪಾಡು ಹೊಂದಿದ ನಂತರ ಸಂಸ್ಥೆಯ ಕಾರ್ಯ ಚಟುವಟಿಕೆಗಳಲ್ಲಿ ಸುಧಾರಣೆಯನ್ನು ತರಲು ಈಗಾಗಲೇ ಸಾಕಷ್ಟು ಪ್ರಯತ್ನಗಳು ನಡೆದಿದ್ದು, ಪೂರ್ಣ ಪ್ರಮಾಣದಲ್ಲಿ ಈ ಸುಧಾರಣಾ ಕಾರ್ಯವು ಇನ್ನೂ ನಡೆಯಬೇಕಾಗಿರುವುದರಿಂದ, ಈ ದಿಸೆಯಲ್ಲಿ ದೊರಕುವ ಫಲಿತಾಂಶದ ಬಗ್ಗೆ ಸುಧಾರಣಾ ಕಾರ್ಯವು ಪೂರ್ಣಗೊಂಡ ನಂತರವೇ ತಿಳಿಯಲು ಸಾಧ್ಯವಾಗುವುದು.

ಆ) ಇದುವರೆಗೆ ಸಂಸ್ಥೆಯಲ್ಲಿ ನಡೆದಿರುವ ಸುಧಾರಣಾ ಚಟುವಟಿಕೆಗಳ ಅಂಗವಾಗಿ, ಈ ಕೆಳಕಂಡ ನಿರ್ಧಾರಗಳನ್ನು ಗ್ರಾಹಕರ ಅನುಕೂಲಕ್ಕಾಗಿ ಜಾರಿಗೆ ತರಲಾಗಿರುತ್ತದೆ.

1. ಇಡೀ ರಾಜ್ಯದಲ್ಲಿರುವ ಐದು ಪಾಲನೆ ಮತ್ತು ನಿರ್ವಹಣೆ ವಲಯಗಳನ್ನು ಐದು ಪ್ರಾದೇಶಿಕ ವ್ಯಾಪಾರ ಕೇಂದ್ರಗಳನ್ನಾಗಿ (ರೀಜಿನಲ್ ಬಿಸಿನೆಸ್ ಸೆಂಟರ್ಸ್) ಪರಿವರ್ತಿಸಿ, ಐದು ಜನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಮುಖಂಡತ್ವದಲ್ಲಿ ಕಾರ್ಯನಿರತವಾಗುವಂತೆ ಮಾಡಲಾಗಿದೆ. ಸಾಮಾಗ್ರಿ ಖರೀದಿಯ ಚಟುವಟಿಕೆಯನ್ನು ವಿಕೇಂದ್ರೀಕರಣಗೊಳಿಸಲಾಗಿದೆ.